₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಗುರುವಾರ 28.03.2024 ಸಂಪುಟ: 09 ಸಂಚಿಕೆ:94 ಪುಟಗಳು: 12+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್



**277/3**
**ಐಪಿಎಲ್‌ನಲ್ಲಿ ಹೊಸ ಇತಿಹಾಸ**

- 80(34) ರನ್ - ಕ್ಲಾಸೆನ್ ಕ್ಲಾಸ್ ಆಟ
- ಹೆಡ್-62, ಅಭಿಷೇಕ್ 63 ರನ್
- ಆರ್‌ಸಿಬಿ ದಾಖಲೆ ಮುರಿದ ಎಸ್‌ಆರ್‌ಎಚ್
- 263/5 - ಪುಣೆ ವಿರುದ್ಧ ಗಳಿಸಿದ್ದ ಬೆಂಗಳೂರು


# ವಿಶ್ವವಾಣಿ
ವಿಶ್ವಾಸವೇ ವಿಶ್ವ


ಇಂದಿನಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭ 14 ಕ್ಷೇತ್ರಗಳಲ್ಲಿ ನಡೆಯಲಿದೆ ಮೊದಲ ಹಂತದ ಚುನಾವಣೆ | ಏ. 4 ನಾಮಪತ್ರ ಸಲ್ಲಿಕೆಗೆ ಕಡೆ ದಿನ


# ಏ.26ರ ಲೋಕ ಸಮರ ಇಂದು ಅಧಿಕೃತ ಚಾಲನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಲೋಕಸಭೆ ಚುನಾವಣೆ ರಾಜ್ಯದ ಮೊದಲ ಹಂತದ (ದೇಶದಲ್ಲಿ 2ನೇ ಹಂತ) ಚುನಾವಣೆಗೆ ಗುರುವಾರ (ಮಾ. 28) ಅಧಿಸೂಚನೆ ಹೊರಬೀಳಲಿದ್ದು, ನಾಮಪತ್ರ ಸಲ್ಲಿಕೆ ಕಾರ್ಯ ಆರಂಭವಾಗಲಿದೆ. ಮೊದಲ ಹಂತದಲ್ಲಿ ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ಗುರುವಾರ ದಿಂದ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭವಾಗಲಿದ್ದು, ಏ. 4 ನಾಮಪತ್ರ ಸಲ್ಲಿಸಲು ಕಡೆಯ ದಿನ. ಏ. 5ರಂದು ನಾಮಪತ್ರಗಳ ಪರಿಶೀಲನೆ, ಏ. 8 ನಾಮಪತ್ರ ಹಿಂತೆಗೆದುಕೊಳ್ಳಲು ಕಡೆಯ ದಿನ. ಏ. 26ರಂದು ಮತದಾನ ನಡೆಯಲಿದ್ದು, ಅಭ್ಯರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ. ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ಸನ್ನು ಸೋಲಿಸಲು ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡಿರುವುದ ರಿಂದ ಈ ಬಾರಿ ಕಾಂಗ್ರೆಸ್ ಮತ್ತು ಮೈತ್ರಿ ಪಕ್ಷಗಳ ಮಧ್ಯೆ ನೇರ ಹಣಾಹಣಿ ನಡೆಯ ಲಿದೆ. ಕಾಂಗ್ರೆಸ್ 20 ಕ್ಷೇತ್ರಗಳನ್ನು ಗೆಲ್ಲುವ ಗುರಿಯೊಂದಿಗೆ ಹೋರಾಟಕ್ಕಿಳಿದರೆ, 28ಕ್ಕೆ 28 ಕ್ಷೇತ್ರಗಳನ್ನೂ ಗೆಲ್ಲುವ ಉತ್ಸಾಹ ದೊಂದಿಗೆ ಬಿಜೆಪಿ-ಜೆಡಿಎಸ್ ಮೈತ್ರಿ ಪ್ರಯತ್ನಿಸುತ್ತಿದೆ. ಹೀಗಾಗಿ ಈ ಹೋರಾಟ ಕುತೂಹಲ ಕೆರಳಿಸಿದೆ.

**ಕಾಂಗ್ರೆಸ್‌ನ 3 ಅಭ್ಯರ್ಥಿಗಳ ಪ್ರಕಟ ಬಾಕಿ**

ರಾಜ್ಯದಲ್ಲಿ ಮೊದಲ ಹಂತದಲ್ಲಿ ಚುನಾವಣೆ ನಡೆಯಲಿರುವ 14 ಕ್ಷೇತ್ರಗಳಲ್ಲಿ ಮಿತ್ರ ಪಕ್ಷಗಳಾದ ಬಿಜೆಪಿ ತನ್ನ ಎಲ್ಲಾ 11 ಹಾಗೂ ಜೆಡಿಎಸ್ ಎಲ್ಲಾ 3 ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಘೋಷಿಸಿದೆ. ಆದರೆ, ಕಾಂಗ್ರೆಸ್ 11 ಕ್ಷೇತ್ರಗಳಿಗೆ ಮಾತ್ರ ಅಭ್ಯರ್ಥಿಗಳನ್ನು ಪ್ರಕಟಿಸಿದ್ದು, ಕೋಲಾರ, ಚಾಮರಾಜನಗರ ಮತ್ತು ಚಿಕ್ಕಬಳ್ಳಾಪುರ ಕ್ಷೇತ್ರಗಳಿಗೆ ಇನ್ನೂ ಅಭ್ಯರ್ಥಿಗಳನ್ನು ಘೋಷಣೆ ಮಾಡಿಲ್ಲ. ಅದರಲ್ಲೂ ಕೋಲಾರ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಬಿಕ್ಕಟ್ಟು ತೀವ್ರಗೊಂಡಿದ್ದು, ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.




1 ಉಡುಪಿ-ಚಿಕ್ಕಮಗಳೂರು, 2 ಹಾಸನ, 3 ದಕ್ಷಿಣ ಕನ್ನಡ, 4 ಚಿತ್ರದುರ್ಗ, 5 ತುಮಕೂರು, 6 ಮಂಡ್ಯ, 7 ಮೈಸೂರು, 8 ಚಾಮರಾಜನಗರ, 9 ಬೆಂಗಳೂರು ಗ್ರಾಮಾಂತರ, 10 ಬೆಂಗಳೂರು ಉತ್ತರ, 11 ಬೆಂಗಳೂರು ಕೇಂದ್ರ, 12 ಬೆಂಗಳೂರು ದಕ್ಷಿಣ, 13 ಚಿಕ್ಕಬಳ್ಳಾಪುರ, 14 ಕೋಲಾರ

**ಚುನಾವಣಾ ಪ್ರಕ್ರಿಯೆ**

| | |
|---|---|
| ನಾಮಪತ್ರ ಸಲ್ಲಿಕೆ ಆರಂಭ | ಮಾ. 28 |
| ನಾಮಪತ್ರ ಸಲ್ಲಿಸಲು ಕಡೆಯ ದಿನ | ಏ. 4 |
| ನಾಮಪತ್ರಗಳ ಪರಿಶೀಲನೆ | ಏ. 5 |
| ನಾಮಪತ್ರ ಹಿಂತೆಗೆದುಕೊಳ್ಳಲು ಕಡೆಯ ದಿನ | ಏ. 8 |
| ಮತದಾನ | ಏ. 26 |

**14 ಲೋಕಸಭಾ ಕ್ಷೇತ್ರದ ಮತದಾರರು**

| | |
|---|---|
| ಪುರುಷರು | 1,42,90,621 |
| ಮಹಿಳೆಯರು | 1,42,44,885 |
| ಇತರರು | 3028 |
| ಒಟ್ಟು | 2,85,42,667 |

**ಪುಟ ತೆರೆದಂತೆ...**



ಭಿಡೆ ಬಿಡದಿದ್ದರೆ ಬದುಕೇ ಬಲುಭಾರ!
ನೂರೆಂಟು ವಿಶ್ವ

ಸಂ.ಪುಟ | 6



ಪ್ರಜಾಪ್ರಭುತ್ವಕ್ಕೆ ಅಮರಿಕೊಂಡ ವಿಕೃತಿಗಳು
ಚರ್ಚಾವೇದಿಕೆ

ಸಂ.ಗಮ | 7



ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ನಾಲ್ಕು ಲವ್ ಬರ್ಡ್‌ಗೆ 444ರು ಟಿಕೆಟ್

ನಾಡು ಕರುನಾಡು | 8

**ಭಾರತ ಮತ ಮಹಾ ಸಮರ**

- ಕೈ, ಕಮಲದಲ್ಲಿ ಬೆಂ.ಉತ್ತರ ಯಾರಿಗೆ?
- ಬಿಜೆಪಿ ಬಂಡಾಯ ಶೀಘ್ರವೇ ಶಮನ
- ಕಾಂಗ್ರೆಸ್: ಡಿಕೆಶಿ, ಇತರರ ಮಧ್ಯೆ ಜಗಳ
- ದೇವಭೂಮಿಯಲ್ಲಿ ಯಾರಿಗೆ ಸಿಗಲಿದೆ ಆಶೀರ್ವಾದ?
- ಏಳು ಸಲ ಗೆದ್ದಿದ್ದೇನೆ; ಹತ್ತಾರು ಜನರನ್ನು ಶಾಸಕರನ್ನಾಗಿ ಮಾಡಿದ್ದೇನೆ
- ನನ್ನ ನಿರ್ಧಾರ ಬದಲಿಸಲ್ಲ: ಮಾಧುಸ್ವಾಮಿ

ಸ್ಥಳೀಯ ಕಾಂಗ್ರೆಸ್ ನಾಯಕರಲ್ಲಿ ಭುಗಿಲೆದ್ದ ಭಿನ್ನಮತ | ಸಚಿವರ ಸಮೇತ ರಾಜೀನಾಮೆಗೆ ಮುಂದಾದ ಕೈ ಶಾಸಕರು | ಮುನಿಯಪ್ಪ ಅಳಿಯನಿಗೆ ಟಿಕೆಟ್ ನೀಡದಂತೆ ಒಕ್ಕೊರಲ ಆಗ್ರಹ

# ಕೋಲಾರ ಟಿಕೆಟ್ ಕೈಡ್ರಾಮಾ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇಷ್ಟು ದಿನ ಬೂದಿಮುಚ್ಚಿದ ಕೆಂಡವಾಗಿದ್ದ ಕೋಲಾರ ಲೋಕಸಭಾ ಕ್ಷೇತ್ರದ ಟಿಕೆಟ್ ಘೋಷಣೆಯ ವಿವಾದ ಬುಧವಾರ ಸ್ಫೋಟವಾಗಿದ್ದು, ವಿಧಾನಸೌಧದಲ್ಲಿ ದೊಡ್ಡ ಹೈಡ್ರಾಮಾಕ್ಕೆ ಸಾಕ್ಷಿಯಾಯಿತು.

ಗುರುವಾರದಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗುತ್ತಿದ್ದು, ಬುಧವಾರ ಕೋಲಾರ ಸೇರಿದಂತೆ ಇನ್ನುಳಿದ ಲೋಕಸಭಾ ಟಿಕೆಟ್ ಅಭ್ಯರ್ಥಿಗಳ ಘೋಷಣೆಯಾಗಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ, ಕೋಲಾರದಿಂದ ಸಚಿವ ಕೆ.ಎಚ್.ಮುನಿಯಪ್ಪ ಅವರ ಅಳಿಯ ಚಿಕ್ಕಪೆದ್ದಪ್ಪಗೆ ಟಿಕೆಟ್ ನೀಡುವದನ್ನು ವಿರೋಧಿಸಿ, ಸಚಿವ ಡಾ.ಎಂ.ಸಿ. ಸುಧಾಕರ್ ಸೇರಿದಂತೆ ಶಾಸಕ ಕೊತ್ತನೂರು ಮಂಜುನಾಥ್, ಕೆ.ವೈ. ನಂಜೇಗೌಡ ಅವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲು ಸಜ್ಜಾಗಿದ್ದರೆ, ಇತ್ತ ವಿಧಾನಪರಿಷತ್ ಸ್ಥಾನಕ್ಕೆ ಸಿಎಂ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್ ಹಾಗೂ ಅನಿಲ್ ಕುಮಾರ್ ರಾಜೀನಾಮೆ ನೀಡಲು ಮುಂದಾಗಿ ತಮ್ಮ ಆಕ್ರೋಶ ಹೊರಹಾಕಿದರು.

ಕೋಲಾರ ಲೋಕಸಭಾ ಕ್ಷೇತ್ರವನ್ನು ಯಾರಿಗೆ ನೀಡಬೇಕು ಎನ್ನುವ ಅಂತಿಮ ತೀರ್ಮಾನವಾಗಿಲ್ಲ. ಆದ್ದರಿಂದ ಯಾರೊಬ್ಬರೂ ಈ ರೀತಿಯ ತೀರ್ಮಾನ ತಗೆದುಕೊಳ್ಳಬಾರದು ಎನ್ನುವ ಮನವಿಯನ್ನು ಮುಖ್ಯಮಂತ್ರಿ, ಉಪಮುಖ್ಯ ಮಂತ್ರಿಗಳು ಮನವಿ ಮಾಡಿ, ಕೋಲಾರ ನಾಯಕರೊಂದಿಗೆ ಸಭೆ ನಡೆಸುವ ಭರವಸೆ ನೀಡಿದ್ದರಿಂದ ರಾಜೀನಾಮೆ ನೀಡಲು ಮುಂದಾಗಿದ್ದವರು 'ತಾತ್ಕಲಿಕ'ವಾಗಿ ಮುಂದಕ್ಕೆ ಹಾಕಿದ್ದಾರೆ.

**ಇಂದು ಸಭೆ:** ಕೋಲಾರ ಲೋಕಸಭಾ ಟಿಕೆಟ್ ಘೋಷಣೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಉದ್ಭವಿಸಿರುವ ಬಂಡಾಯ ಶಮನಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಗುರುವಾರ ಸಭೆ ನಡೆಯಲಿದೆ. ಮೂಲಗಳ ಪ್ರಕಾರ, ರಮೇಶ್ ಕುಮಾರ್ ಹಾಗೂ ಮುನಿಯಪ್ಪ ಎರಡೂ ಕಡೆಯವರು ಬಿಗಿಪಟ್ಟು ಸಡಲಿಸುವ ಸಾಧ್ಯತೆಗಳು ಕಡಿಮೆ ಇರುವುದರಿಂದ, ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಮತ್ತೊಂದು ಹಂತದಲ್ಲಿ ಸಭೆ ನಡೆಸುವ ಸಾಧ್ಯತೆಯಿದೆ.

→ 8

**ಭಿನ್ನಮತದ ಬೆನ್ನಲ್ಲೇ ಘೋಷಣೆ ಪೆಂಡಿಂಗ್**

ಬುಧವಾರ ಕೋಲಾರ ಸೇರಿದಂತೆ ಕೆಲ ಕ್ಷೇತ್ರದ ಅಭ್ಯರ್ಥಿಗಳ ಪಟ್ಟಿಯನ್ನು ಘೋಷಿಸಬೇಕಿತ್ತು. ಆದರೆ ಕೋಲಾರದಲ್ಲಿ ಭಾರಿ ಪ್ರಮಾಣದಲ್ಲಿ ವಿರೋಧ ವ್ಯಕ್ತವಾಗಿದ್ದರಿಂದ ಟಿಕೆಟ್ ಘೋಷಣೆಯನ್ನು ಪೆಂಡಿಂಗ್ ಇಡುವ ತೀರ್ಮಾನಕ್ಕೆ ಪಕ್ಷದ ವರಿಷ್ಠರು ಬಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

**ದಿನವಿಡೀ ಏನಾಯ್ತು?**

- ಯಾವುದೇ ಕಾರಣಕ್ಕೂ ಚಿಕ್ಕಪೆದ್ದಪ್ಪಗೆ ಟಿಕೆಟ್ ನೀಡಬಾರದು ಎಂದ ಜಿಲ್ಲೆಯ ಶಾಸಕರು
- ಈಗಾಗಲೇ ಖರ್ಗೆ ಅವರಿಂದ ಭರವಸೆ ಪಡೆದುಕೊಂಡು ಬಂದಿರುವ ಮುನಿಯಪ್ಪ
- ವಿಧಾನಪರಿಷತ್‌ನ ಇಬ್ಬರು, ವಿಧಾನಸಭೆಯ ಮೂವರು ಶಾಸಕರು ರಾಜೀನಾಮೆಗೆ ಸಿದ್ಧ
- ಹಾಲಿ ಸಚಿವ ಡಾ.ಎಂ. ಸಿ. ಸುಧಾಕರ್ ಅವರ ನೇತೃತ್ವದಲ್ಲಿ ಒಂದಾದ ಶಾಸಕರು
- ರಾಜೀನಾಮೆ ಪತ್ರ ಸಿದ್ಧವಿದ್ದ ಸಮಯದಲ್ಲಿ ಸಿಎಂ, ಡಿಸಿಎಂ ಸೂಚನೆಯಿಂದ ಹಿಂದೆ ಸರಿದ ಶಾಸಕರು

**ವಿರೋಧವೇಕೆ?**

- ಈಗಾಗಲೇ ಮುನಿಯಪ್ಪ ಅವರ ಕುಟುಂಬದ ಇಬ್ಬರು ಜನಪ್ರತಿನಿಧಿಗಳಿದ್ದಾರೆ.
- ತಂದೆ ಸಚಿವರಾಗಿದ್ದರೆ, ಪುತ್ರಿ ಶಾಸಕಿ ಹಾಗೂ ನಿಗಮ ಮಂಡಳಿ ಅಧ್ಯಕ್ಷರಾಗಿದ್ದಾರೆ.
- ಹೀಗಿರುವಾಗ ಅವರ ಕುಟುಂಬದ ಬದಲಿಗೆ ಬೇರೆಯವರಿಗೆ ಟಿಕೆಟ್ ನೀಡಬೇಕು.
- ಜಿಲ್ಲೆಯ ಅಭಿವೃದ್ಧಿಯಲ್ಲಿ ಮುನಿಯಪ್ಪ ಅವರ ಕೊಡುಗೆ ಹೇಳಿಕೊಳ್ಳುವಂತಿಲ್ಲ.
- ದಲಿತ ಬಲಗೈ ಸಮುದಾಯಕ್ಕೆ ಕೋಲಾರದ ಟಿಕೆಟ್ ಕೊಟ್ಟರೆ ಹಲವು ಕ್ಷೇತ್ರದಲ್ಲಿ ಪಕ್ಷಕ್ಕೆ ಲಾಭ.



ಕೋಲಾರದಲ್ಲಿ ಬಲಗೈ ಸಮುದಾಯಕ್ಕೆ ಟಿಕೆಟ್ ನೀಡಬೇಕು ಎಂದು ಕೆಲವರು ಆಗ್ರಹಿಸುತ್ತಿದ್ದಾರೆ. ಈವರೆಗೆ ಯಾರಿಗೂ ಟಿಕೆಟ್ ಘೋಷಿಸಲ್ಲ. ಈ ಬಗ್ಗೆ ಎಲ್ಲ ನಾಯಕರೊಂದಿಗೆ ಚರ್ಚಿಸಿ, ಅಂತಿಮಗೊಳಿಸಲಾಗುವುದು. ಅಸಮಾಧಾನಗೊಂಡಿರುವ ಎಲ್ಲರೊಂದಿಗೆ ಚರ್ಚಿಸುತ್ತೇನೆ.
- ಸಿದ್ದರಾಮಯ್ಯ, ಮುಖ್ಯಮಂತ್ರಿ



ಕಳೆದ ಲೋಕಸಭೆ ಚುನಾವಣೆಯಲ್ಲಿ ನನ್ನನ್ನು ಸೋಲಿಸಿದವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಂಡರು, ವಿಧಾನಸಭೆಯಲ್ಲಿ ಟಿಕೆಟ್ ನೀಡಿ ಗೆಲ್ಲಿಸಿಕೊಂಡರು. ಸಚಿವರನ್ನಾಗಿ ಮಾಡಿದರೂ ನಾನು ವಿರೋಧ ಮಾಡಲಿಲ್ಲ. ಈಗ ಉದ್ದೇಶ ಪೂರ್ವಕವಾಗಿ ನನ್ನ ವಿರುದ್ಧ ಷಡ್ಯಂತ್ರ ಮಾಡಲಾಗುತ್ತಿದೆ.
- ಕೆ.ಎಚ್. ಮುನಿಯಪ್ಪ, ಸಚಿವ

**ಇಕ್ಕಟ್ಟಿನಲ್ಲಿ ಕಾಂಗ್ರೆಸ್**

ಈ ನಡುವೆ ಸಚಿವ ಕೆ.ಎಚ್.ಮುನಿಯಪ್ಪ ಅವರ ಅಳಿಯನಿಗೆ ಟಿಕೆಟ್ ಕೊಟ್ಟರೆ ರಾಜೀನಾಮೆ ನೀಡುವುದಾಗಿ ಈ ಶಾಸಕರು ಹೇಳುತ್ತಿದ್ದರೆ, ಅತ್ತ ಮುನಿಯಪ್ಪ ಅವರು ಈಗಾಗಲೇ ಸೋನಿಯಾ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಟಿಕೆಟ್ ನೀಡುವಂತೆ ಮನವಿ ಮಾಡಿದ್ದಾರೆ. ಇದಕ್ಕೆ ದೆಹಲಿ ನಾಯಕರಿಗೆ ಒಪ್ಪಿಗೆ ಸಿಕ್ಕಿದೆ. ಒಂದು ವೇಳೆ ಈ ಹಂತದಲ್ಲಿ ಟಿಕೆಟ್ ಬೇರೆಯವರಿಗೆ ಕೊಟ್ಟರೆ, ಮುನಿಯಪ್ಪ ಅವರು ಬಂಡಾಯವೇಳುವ ಸಾಧ್ಯತೆಯಿರುವುದರಿಂದ, ಏನು ಮಾಡಬೇಕು ಎನ್ನುವ ಇಕ್ಕಟ್ಟಿನಲ್ಲಿ ನಾಯಕರಿದ್ದಾರೆ.

**ದಾರಿದೀಪೋಕ್ತಿ**

ಜನರು ಹತ್ತಾರು ವಿಧಗಳಲ್ಲಿ ನಿಮ್ಮ ಮನಸ್ಸನ್ನು ನೋಯಿಸಲು ನೋಡುತ್ತಲೇ ಇರುತ್ತಾರೆ. ಆದರೆ ನೀವು ಸಂತೋಷವನ್ನು ಕಂಡುಕೊಳ್ಳಲು ಹನ್ನೊಂದು ಮಾರ್ಗಗಳನ್ನು ಹುಡುಕಿಕೊಳ್ಳಬೇಕು. ನಿಮ್ಮ ಸಂತೋಷ, ನೆಮ್ಮದಿಯನ್ನು ಬೇರೆಯವರು ಕಸಿದುಕೊಳ್ಳಲು ಬಿಡಬಾರದು.

**ವಕ್ರತುಂಡೋಕ್ತಿ**

ನಿಜವಾದ ನಂಬಿಕೆದ್ರೋಹ ಅಂದ್ರೆ, ಪರೀಕ್ಷೆ ಹಾಲ್‌ನಲ್ಲಿ ನಿಮ್ಮ ಆತ್ಮೀಯ ಸ್ನೇಹಿತ ಸುಮ್ಮನಿರು ಅಂತ ಹೇಳೋದು.

ಬೆಂಗಳೂರು, ಶಿವಮೊಗ್ಗ, ಹುಬ್ಬಳ್ಳಿ, ಭಟ್ಕಳದಲ್ಲಿ ಶೋಧ ಚೆನ್ನೈನ ಮೂರು ಕಡೆಗಳಲ್ಲಿ ದಾಳಿ ನಡೆಸಿದ ಎನ್‌ಐಎ

## ರಾಮೇಶ್ವರಂ ಕೆಫೆ ಸ್ಫೋಟ 5 ನಗರಗಳಲ್ಲಿ ಎನ್‌ಐಎ ದಾಳಿ

**ಬೆಂಗಳೂರು:** ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಸೇರಿದಂತೆ ರಾಜ್ಯದ ನಾಲ್ಕು ನಗರಗಳು ಮತ್ತು ಚೆನ್ನೈನಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಧಿಕಾರಿಗಳು ಬುಧವಾರ ದಾಳಿ ನಡೆಸಿದ್ದಾರೆ.

ಈಗಾಗಲೇ ಪ್ರಕರಣ ಸಂಬಂಧ ಹಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿರುವ ಎನ್‌ಐಎ ಅಧಿಕಾರಿಗಳು, ಶಿವಮೊಗ್ಗ, ಬೆಂಗಳೂರು, ಹುಬ್ಬಳ್ಳಿ , ತೀರ್ಥಹಳ್ಳಿ ಮತ್ತು ತಮಿಳುನಾಡಿನ ಚೆನ್ನೈನಲ್ಲಿ ಹಲವರ ಮನೆಗಳ ಮೇಲೆ ದಾಳಿ ನಡೆಸಿದ್ದಾರೆ. ಚೆನ್ನೈಯ ಲಾಡ್ಜ್‌ನಲ್ಲಿ ಶಂಕಿತ ಬಾಂಬರ್ ಹಲವಾರು ದಿನಗಳ ಕಾಲ ಉಳಿದುಕೊಂಡಿದ್ದ ಎಂಬ ಶಂಕೆ ಹಿನ್ನೆಲೆಯಲ್ಲಿ ಚೆನ್ನೈನಲ್ಲಿ ಮೂರು ಕಡೆ ಎನ್‌ಐಎ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲಿಸಿದ್ದಾರೆ. ಅಲ್ಲದೆ, ಶಿವಮೊಗ್ಗದ ಸೊಪ್ಪುಗುಡ್ಡೆ, ತೀರ್ಥಹಳ್ಳಿಯಲ್ಲಿ ಶೋಧ ನಡೆಸಲಾಗಿದೆ.

ಶಂಕಿತ ಉಗ್ರರಾಗಿರುವ ಅಬ್ದುಲ್ ಮತೀನ್ ತಾಹ, ಮುಸಾವಿರ್ ಹುಸೇನ್ ಶಾಹೀಜ್ ಮನೆಗಳಲ್ಲಿ ಪರಿಶೀಲನೆ ನಡೆಸಲಾಗಿದೆ. 2020ರಿಂದಲೂ ಈ ಇಬ್ಬರು ಶಂಕಿತ ಉಗ್ರರು ನಾಪತ್ತೆಯಾಗಿದ್ದಾರೆ. ಗುರಪ್ಪನಪಾಳ್ಯದಲ್ಲಿ ಇವರು ಭಯೋತ್ಪಾದಕ ಕೃತ್ಯ ನಡೆಸಲು 2020ರಲ್ಲಿ ಸಭೆ ನಡೆಸಿದ್ದರು. ಈ ಕುರಿತು ಮಾಹಿತಿ ಪಡೆದು ಸಿಸಿಬಿ ದಾಳಿ ನಡೆಸಿತ್ತು. ಬಳಿಕ ಆ ಪ್ರಕರಣ ಎನ್‌ಐಗೆ ವರ್ಗಾವಣೆಯಾಗಿತ್ತು. ಎನ್‌ಐಎ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ.

→ 8




- ಹಲವು ಶಂಕಿತರ ವಶಕ್ಕೆ ಪಡೆದು ವಿಚಾರಣೆ
- ಶಂಕಿತ ಉಗ್ರರ ನಿವಾಸಗಳಲ್ಲಿ ಪರಿಶೀಲನೆ

**ಶಿವಮೊಗ್ಗ, ಭಟ್ಕಳದಲ್ಲೂ ಎನ್‌ಐಎ ಶೋಧ**

ಬುಧವಾರ ಬೆಳಗ್ಗೆ ಶಿವಮೊಗ್ಗದ ಇಂದಿರಾ ನಗರ, ಬೆಟ್ಟಮಕ್ಕಿ ಮತ್ತು ಮಸೀದಿ ರಸ್ತೆಗಳಲ್ಲಿ 15 ಮಂದಿಯ ಎನ್‌ಐಎ ಅಧಿಕಾರಿಗಳ ತಂಡವು ಕೆಲ ಮನೆಗಳಲ್ಲಿ ಶೋಧ ಕಾರ್ಯ ನಡೆಸಿದ್ದಾರೆ. ಇಲ್ಲಿನ ಸೊಪ್ಪುಗುಡ್ಡೆಯ ನಿವಾಸಿಯಾಗಿರುವ ಮಂಗಳೂರು ಬಾಂಬ್ ಸ್ಫೋಟದ ಆರೋಪಿ ಶಾರೀಕ್‌ಗೆ ಹಲವು ಉಗ್ರರಿಗೆ ನಂಟಿದೆ ಎಂಬ ಶಂಕೆ ಇದೆ. ಇನ್ನು ಭಟ್ಕಳದ ತಕಿಯಾ ಸ್ಟ್ರೀಟ್‌ನ ಶಂಕಿತ ಉಗ್ರ ಇಕ್ಬಾಲ್ ಭಟ್ಕಳ ಪುತ್ರ ಅಬ್ದುಲ್ ರಬಿ ಮನೆ ಮೇಲೆ ದಾಳಿ ನಡೆಸಲಾಗಿದೆ. ಕೆಫೆ ಬ್ಲಾಸ್ಟ್‌ನ ಬಾಂಬರ್ ವಯಸ್ಸು ಅಬ್ದುಲ್ ರಬಿಗೆ ಹೋಲಿಕೆಯಾಗುವ ಹಿನ್ನೆಲೆ ಎನ್‌ಐಎ ತಂಡ ಹಾಗೂ ಸ್ಥಳೀಯ ಪೊಲೀಸರ ಸಹಕಾರದಿಂದ ಶಂಕಿತನ ಮನೆಯಲ್ಲಿ ವಿಚಾರಣೆ ನಡೆಸಿದ್ದು ಗುರುವಾರ ಎನ್‌ಐಎ ಕಚೇರಿಗೆ ಹಾಜರಾಗಿ ವಿಚಾರಣೆ ಎದುರಿಸುವಂತೆ ಸೂಚನೆ ನೀಡಲಾಗಿದೆ.

ಇಡಿ ಕಸ್ಟಡಿ ಪ್ರಶ್ನಿಸಿದ್ದ ದೆಹಲಿ ಸಿಎಂ

## ಕೇಜ್ರಿವಾಲ್‌ಗೆ ಸಿಗದ ರಿಲೀಫ್



**ದೆಹಲಿ:** ಜಾರಿ ನಿರ್ದೇಶನಾಲಯದ ಬಂಧನ ಕ್ರಮ ಪ್ರಶ್ನಿಸಿ ದೆಹಲಿ ಹೈಕೋರ್ಟ್‌ಗೆ ಹೋಗಿದ್ದ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ನಿರಾಸೆಯಾಗಿದ್ದು, ತಕ್ಷಣಕ್ಕೆ ಬಿಡು ಗಡೆಯ ಭಾಗ್ಯ ನೀಡಿಲ್ಲ. ಕೇಜ್ರಿವಾಲ್ ಅರ್ಜಿ ಸಂಬಂಧ ಉತ್ತರಿಸುವಂತೆ ಇಡಿಗೆ ಏ.2ರ ವರೆಗೆ ಸಮಯ ನೀಡಿದ್ದು, ಏ.3ಕ್ಕೆ ಮತ್ತೆ ವಿಚಾರಣೆ ನಡೆಸುವುದಾಗಿ ಹೇಳಿದೆ.

ಬಿಜೆಪಿ ವರಿಷ್ಠರಿಗೆ ಬಿ.ವಿ.ನಾಯಕ್ ಎಚ್ಚರಿಕೆ

## ಟಿಕೆಟ್ ಕೊಡದಿದ್ರೆ ನನ್ನ ದಾರಿ ನನಗೆ

**ರಾಯಚೂರು:** ಎರಡು ದಿನದಲ್ಲಿ ಬಿಜೆಪಿ ವರಿಷ್ಠರು ಟಿಕೆಟ್ ಮರುಪರಿಶೀಲನೆ ನಡೆಸಿ ನಿರ್ಧಾರ ಪ್ರಕಟಿಸಬೇಕು. ಇಲ್ಲವಾದರೆ ನನ್ನ ದಾರಿ ನನಗೆ ಎಂದು ಟಿಕೆಟ್ ಆಕಾಂಕ್ಷಿ ಬಿ.ವಿ.ನಾಯಕ ಎಚ್ಚರಿಕೆ ನೀಡಿದರು. ಹಿತೈಷಿಗಳ ಸಭೆಯಲ್ಲಿ ಬೇಸರ ವ್ಯಕ್ತಪಡಿಸಿದ ಅವರು, ಕಾರ್ಯಕರ್ತರ ನಿರ್ಧಾರಕ್ಕೆ ಬದ್ಧ ಎಂದಿದ್ದಾರೆ. ಈ ಮಧ್ಯೆ, ಟಿಕೆಟ್ ತಪ್ಪಿದ್ದರಿಂದ ಬೇಸತ್ತ ಇಬ್ಬರು ಬೆಂಬಲಿಗರು ಆತ್ಮಹತ್ಯೆಗೂ ಯತ್ನಿಸಿದ್ದು, ಕಾರ್ಯಕರ್ತರು ತಪ್ಪಿಸಿದ್ದಾರೆ.

ಬಿಜೆಪಿಯ ಎಲ್ಲ 25 ಕ್ಷೇತ್ರಗಳಿಗೂ ಅಭ್ಯರ್ಥಿ ಘೋಷಣೆ

## ಕಾರಜೋಳಗೆ ಒಲಿದ ಚಿತ್ರದುರ್ಗ ಟಿಕೆಟ್



**ಬೆಂಗಳೂರು:** ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ಚಿತ್ರದುರ್ಗ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಹಂಚಿಕೆಗೊಂದಲ ಕೊನೆಗೂ ಬಗೆಹರಿದಿದ್ದು, ಮಾಜಿ ಸಚಿವ ಗೋವಿಂದ ಕಾರಜೋಳ ಅವರನ್ನು ಅಭ್ಯರ್ಥಿ ಎಂದು ಪಕ್ಷ ಘೋಷಿಸಿದೆ. ಇದರೊಂದಿಗೆ ಬಿಜೆಪಿ ಎಲ್ಲಾ 25 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ. ಮೂರು ಕ್ಷೇತ್ರಗಳನ್ನು ಮಿತ್ರಪಕ್ಷ ಜೆಡಿಎಸ್‌ಗೆ ಬಿಟ್ಟುಕೊಡಲಾಗಿದೆ.

- ಕೇಂದ್ರ ಸಚಿವ ಎ.ನಾರಾಯಣಸ್ವಾಮಿಗೆ ಸಿಗಲಿಲ್ಲ ಅವಕಾಶ
- ಮಾದಾರ ಚೆನ್ನಯ್ಯ, ಜನಾರ್ದನಸ್ವಾಮಿಗೆ ತಪ್ಪಿದ ಟಿಕೆಟ್

ಕೇಂದ್ರ ಸಚಿವರೂ ಆಗಿರುವ ಹಾಲಿ ಸಂಸದ ಎ.ನಾರಾಯಣಸ್ವಾಮಿ ಅವರಿಗೆ ಟಿಕೆಟ್ ನೀಡದೇ ಇರಲು ಆರಂಭದಲ್ಲೇ ನಿರ್ಧರಿಸಲಾಗಿತ್ತು.

ಹೀಗಾಗಿ ಈ ಕ್ಷೇತ್ರಕ್ಕೆ ಮಾಜಿ ಸಂಸದ ಜನಾರ್ದನ ಸ್ವಾಮಿ ಪ್ರಯತ್ನ ನಡೆಸಿದ್ದರು. ಈ ಮಧ್ಯೆ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಅವರನ್ನು ಕಣಕ್ಕಿಳಿಸಲು ಬಿಜೆಪಿ ಚಿಂತನೆ ನಡೆಸಿತ್ತು. ಈ ಮಧ್ಯೆ ಮಾಜಿ ಸಚಿವ ಗೋವಿಂದ ಕಾರಜೋಳ ಅವರ ಹೆಸರೂ ಈ ಕ್ಷೇತ್ರಕ್ಕೆ ಕೇಳಿಬಂದಿತ್ತು.

ಕೊನೆಗೂ ಮಾದಾರ ಚನ್ನಯ್ಯ ಸ್ವಾಮೀಜಿ ಸ್ಪರ್ಧೆಗೆ ಹಿಂದೆ ಸರಿದ ಕಾರಣ ಮಾಜಿ ಸಂಸದ ಜನಾರ್ದನ ಸ್ವಾಮಿ ಮತ್ತು ಗೋವಿಂದ ಕಾರಜೋಳ ಮಧ್ಯೆ ಸ್ಪರ್ಧೆ ಏರ್ಪಟ್ಟಿತ್ತು. ಆದರೆ, ಚಿತ್ರದುರ್ಗ ಮೀಸಲು ಕ್ಷೇತ್ರದಲ್ಲಿ ಒಮ್ಮೆ ಗೆದ್ದವರು ಎರಡನೇ ಬಾರಿ ಗೆಲ್ಲುವುದಿಲ್ಲ ಎಂಬ ಕಾರಣಕ್ಕೆ ಗೋವಿಂದ ಕಾರಜೋಳ ಹೆಸರನ್ನು ಬಿಜೆಪಿ ವರಿಷ್ಠರು ಅಂತಿಮಗೊಳಿಸಿದ್ದಾರೆ.

ಛತ್ತೀಸ್‌ಗಡದಲ್ಲಿ ಭದ್ರತಾ ಪಡೆ ಕಾರ್ಯಾಚರಣೆ

## ಇಬ್ಬರು ಮಹಿಳೆ ಸೇರಿ ಆರು ನಕ್ಸಲರು ಹತ

**ಬಿಜಾಪುರ:** ಛತ್ತೀಸ್‌ಗಡದ ಹರಿತ್ ಜಿಲ್ಲೆಯ ಚಿಪುರ್‌ಭಟ್ಟಿ ಪ್ರದೇಶದಲ್ಲಿ ಬುಧವಾರ ಭದ್ರತಾ ಪಡೆ ಯೋಧರು ಮತ್ತು ಶಸ್ತ್ರಸಜ್ಜಿತ ನಕ್ಸಲರ ನಡುವೆ ಭಾರೀ ಗುಂಡಿನ ಚಕಮಕಿ ನಡೆದಿದ್ದು, ಇಬ್ಬರು ಮಹಿಳಾ ನಕ್ಸಲ್ರು ಸೇರಿದಂತೆ ಸಿಪಿಐ (ಮಾವೋವಾದಿ) ಗುಂಪಿನ ಆರು ಬಂಡುಕೋರರು ಹತರಾಗಿದ್ದಾರೆ.

ಮಾವೋವಾದಿ ನಕ್ಸಲರು ಈ ಪ್ರದೇಶದಲ್ಲಿ ಮೂವರು ಗ್ರಾಮಸ್ಥರನ್ನು ಕೊಂದ ನಂತರ ಜಂಟಿ ಕಾರ್ಯಾಚರಣೆ ನಡೆಸಿ ಹತ ಮಾಡಲಾಗಿದೆ.

ಕೇಂದ್ರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಸಿದ್ದರಾಮಯ್ಯ

## ಅನುದಾನ ಚರ್ಚೆಗೆ ಬರಲು ನಿರ್ಮಲಾಗೆ ಸಿಎಂ ಸವಾಲು




**ಮೈಸೂರು:** ರಾಜ್ಯಕ್ಕೆ ಕೇಂದ್ರದಿಂದ ನೀಡಿರುವ ಹಣಕಾಸಿನ ನೆರವು ಕುರಿತಂತೆ ಸರಿ, ತಪ್ಪುಗಳ ಬಗ್ಗೆ ಮಾಹಿತಿ ನೀಡಲು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಚರ್ಚೆಗೆ ಬರಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪಂಥಾಹ್ವಾನ ನೀಡಿದರು.

ಮೈಸೂರಿನಲ್ಲಿ ನಡೆದ ವಿವಿಧ ಪಕ್ಷಗಳ ಮುಖಂಡರ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಕೇಂದ್ರದಿಂದ ನ್ಯಾಯಯುತವಾಗಿ ಬರಬೇಕಾದ ಹಣ ಕೇಳಿದರೆ, ಅವರು ಗ್ಯಾರಂಟಿ ಯೋಜನೆಗಳಿಗೆ ಹಣ ಕೇಳುತ್ತಿ ದ್ದಾರೆ ಎಂದು ಅಪಪ್ರಚಾರ ಮಾಡುತ್ತಾರೆ. ನಮ್ಮ ಗ್ಯಾರಂಟಿ ಯೋಜನೆಗಳಿಗೆ ಅವರಿಂದ ಒಂದು ಪೈಸೆಯೂ ಬೇಡ. ಆ ಯೋಜನೆಗಳಿಗೆ 23-24 ಸಾಲಿನಲ್ಲಿ 34 ಸಾವಿರ ಕೋಟಿ ವೆಚ್ಚ ಮಾಡಿದ್ದೇವೆ. ಒಂದು ಪೈಸೆಯನ್ನೂ ಕೇಳಿಲ್ಲ. ಮುಂದಿನ ಸಾಲಿಗೆ 59 ಸಾವಿರ ಕೋಟಿ ತೆಗೆದಿಟ್ಟಿದ್ದೇವೆ ಎಂದು ಹೇಳಿದರು.

ಬಿಎಸ್‌ವೈರಿಂದ ಸ್ಥಳೀಯ ಮುಖಂಡರ ಮನವೊಲಿಕೆ

## ಬೆಳಗಾವಿ ಬಿಜೆಪಿ ಭಿನ್ನಮತ ಶಮನ




**ಬೆಳಗಾವಿ:** ಮಾಜಿ ಸಿಎಂ ಜಗದೀಶ್ ಶೆಟ್ಟರ್ ಬೆಳಗಾವಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯಾಗಿ ಘೋಷಣೆ ಆಗುತ್ತಿದ್ದಂತೆ ಹುಟ್ಟಿಕೊಂಡಿದ್ದ ಜಿಲ್ಲಾ ಬಿಜೆಪಿ ಮುಖಂಡರ ಬಂಡಾಯ ಶಮನ ಮಾಡುವಲ್ಲಿ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಬಹುತೇಕ ಯಶಸ್ವಿಯಾಗಿದ್ದಾರೆ. ಅಭ್ಯರ್ಥಿ ಪರ ಕೆಲಸ ಮಾಡಬೇಕು ಎಂಬ ಹೈಕಮಾಂಡ್ ನಿರ್ಧಾರಕ್ಕೆ ಬಹುತೇಕ ಎಲ್ಲ ನಾಯಕರು ಒಪ್ಪಿದ್ದಾರೆ.

ಮಂಗಳವಾರ ತಡರಾತ್ರಿ ನಗರದ ಖಾಸಗಿ ಹೋಟೆಲ್‌ಗೆ ಆಗಮಿಸಿದ ಯಡಿ ಯೂರಪ್ಪ ಜಿಲ್ಲೆಯ ಪ್ರಮುಖ ಮುಖಂಡರ ಜತೆ ಸಭೆ ನಡೆಸಿದರು. ಈ ಸಂದರ್ಭದಲ್ಲಿ ಪ್ರಮುಖ ನಾಯಕರು ಶೆಟ್ಟರ್ ಅಭ್ಯರ್ಥಿ ಆಗಿರುವುದಕ್ಕೆ ಬಂಡಾಯದ ಕಾರಣ ಬಿಚ್ಚಿಟ್ಟರು. ಈ ಸಂದರ್ಭದಲ್ಲಿ ಎಲ್ಲರ ಅಭಿಪ್ರಾಯ ಪಡೆದ ಯಡಿ ಯೂರಪ್ಪ ಒಟ್ಟಾಗಿ ಚುನಾವಣೆ ಗೆಲ್ಲುವ ಕುರಿತು ಸೂಚನೆ ನೀಡಿದ್ದಾರೆ. ಅಷ್ಟೇ ಅಲ್ಲದೆ, ಅನಗತ್ಯ ಗೊಂದಲ ಸೃಷ್ಟಿಸುವ ಮೂಲಕ ಪಕ್ಷದ ಹೈಕಮಾಂಡ್ ನಿರ್ಧಾರಕ್ಕೆ ವಿರುದ್ಧ ಮಾತನಾಡುವ ಕೆಲ ಮುಖಂಡರಿಗೂ ಎಚ್ಚರಿಕೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

**ಅದ್ದೂರಿ ಬೈಕ್ ರ‍್ಯಾಲಿ:** ಮಾಜಿ ಸಿಎಂ ಯಡಿಯೂರಪ್ಪ ಜತೆಗೂಡಿ ನಗರದ ಪ್ರಮುಖ ದೇವಸ್ಥಾನಗಳಿಗೆ ಭೇಟಿ ನೀಡಿದರು. ಅದ್ದೂರಿ ಬೈಕ್ ರ‍್ಯಾಲಿ ಮೂಲಕ ಸಾವಿರಾರು ಕಾರ್ಯಕರ್ತರು ಶೆಟ್ಟರ್ ಅವರನ್ನು ಸ್ವಾಗತಿಸಿದರು.

**ಫನ್‌ತರಂಗ**
- ರಘುಪತಿ ಶೃಂಗೇರಿ -




ಅರುಣಾಚಲ ಪ್ರದೇಶದ ಗ್ರಾಮದಲ್ಲಿ ಏಕಾಂಗಿ ಮತದಾರನಿಗಾಗಿ ಮತಗಟ್ಟೆ ಸ್ಥಾಪನೆ

## ಒಂದು ವೋಟು, 39 ಕಿ.ಮೀ., ಒಂದು ದಿನ!

**ಇಟಾನಗರ:** ಅರುಣಾಚಲ ಪ್ರದೇಶದ ಗುಡ್ಡಗಾಡುವಿನಲ್ಲೊಂದು ಗ್ರಾಮ. ಇಲ್ಲಿ ಇರುವುದು ಒಬ್ಬನೇ ಮತದಾರ. ಈತನಿಗಾಗಿಯೇ ಒಂದು ಮತಗಟ್ಟೆ ಸ್ಥಾಪನೆಯೂ ಆಗಬೇಕು... ಎಲ್ಲಕ್ಕಿಂತ ಮಿಗಿಲಾಗಿ ಈ ಗ್ರಾಮಕ್ಕೆ ಹೋಗಲು 39 ಕಿ.ಮೀ. ನಡೆದೇ ಸಾಗಬೇಕು.

ಹೌದು, ಒಬ್ಬ ಮತದಾರನಿಗಾಗಿ ಕೇಂದ್ರ ಚುನಾವಣಾ ಆಯೋಗ ಎಲ್ಲ ತಯಾರಿ ನಡೆಸಿಕೊಂಡಿದೆ. ದೇಶದ ಉಳಿದ ಕಡೆಗಳಲ್ಲಿ ನಮ್ಮ ಒಂದು ಮತದಿಂದ ಏನು ಪ್ರಯೋಜನ? ದೇಶ ಬದಲಾಗಿ ಬಿಡುತ್ತಾ? ಈ ಎಲ್ಲ ಆಲಸ್ಯಗಳಿಂದಾಗಿ ಮತ ಹಾಕಲು ಪ್ರಜ್ಞಾನಂತ ಮತದಾರರೇ ಹೋಗುವುದಿಲ್ಲ. ಆದರೆ, ಮಾಲೋಗಾಮ್ ಎಂಬ ಹಳ್ಳಿಯ ಒಂದೇ ಒಂದು ಮತಕ್ಕಾಗಿ ಚುನಾವಣಾ ಆಯೋಗ ಸಾಕಷ್ಟು ಶ್ರಮ ಹಾಕುತ್ತಿದೆ.

**ಮತಗಟ್ಟೆಗೆ ಸ್ಥಳಾಂತರ :** ವಿಶೇಷವೆಂದರೆ, ಇಲ್ಲಿ ಕೆಲವೇ ಕೆಲವು ಕುಟುಂಬಗಳು ವಾಸ ಮಾಡುತ್ತಿವೆ. ಆದರೆ, ತಯಾಂಗ್ ಅವರನ್ನು ಬಿಟ್ಟು ಉಳಿದವರೆಲ್ಲರೂ ಬೇರೆ ಬೇರೆ ಮತಗಟ್ಟೆಗಳಲ್ಲಿ ನೋಂದಣಿ ಮಾಡಿಸಿಕೊಂಡಿದ್ದಾರೆ. ಆದರೆ, ಇವರು ಸ್ಥಳಾಂತರವಾಗಲು ಸಿದ್ಧರಿಲ್ಲ. ಹೀಗಾಗಿ, ಏ.19ರ ಮತದಾನಕ್ಕಾಗಿ ಏ.18ರಂದೇ ಅಧಿಕಾರಿಗಳು, ಭದ್ರತಾ ಸಿಬ್ಬಂದಿ ಮತ್ತು ಪೋರ್ಟರ್‌ಗಳು ಸೇರಿ ಚುನಾವಣಾ ಸಿಬ್ಬಂದಿ ತಂಡವು ಹಯುಲಿಯಾಂಗ್‌ನಿಂದ ಪ್ರಯಾಸಕರ ಪ್ರಯಾಣ ಆರಂಭಿಸಲಿದೆ ಎಂದು ಚುನಾವಣಾ ಅಧಿಕಾರಿಗಳು ಹೇಳಿದ್ದಾರೆ.

ಅಲ್ಲದೆ, ಇಲ್ಲಿಂದ ಮಾಲೋಗಾಮ್‌ಗೆ ಹೋಗಲು ಇಡೀ ದಿನ ಬೇಕು. ಜತೆಗೆ ಮತದಾನದ ದಿನದಂದು ಮತದಾನ ತಂಡವು ಬೆಳಿಗ್ಗೆ 7 ರಿಂದ ಸಂಜೆ 5ರವರೆಗೆ ಬೂತ್ ನಲ್ಲಿರಬೇಕಾಗಬಹುದು, ಏಕೆಂದರೆ ತಯಾಂಗ್ ತನ್ನ ಮತ ಚಲಾಯಿಸಲು ಯಾವಾಗ ಬರುತ್ತಾರೆಂದು ನಮಗೆ ತಿಳಿದಿಲ್ಲ ಎಂದು ಸಿಬ್ಬಂದಿ ಹೇಳಿದ್ದಾರೆ. ಆದರೆ, ತಯಾಂಗ್ ಅವರೇ ಏ.18ರ ಸಂಜೆ ವೇಳೆಗೆ ಮಾಲೋಗಾಮ್‌ಗೆ ಮತ ಹಾಕಲು ಹೋಗುತ್ತೇನೆ ಎಂದು ಹೇಳಿದ್ದಾರೆ.

**228 ಮತಗಟ್ಟೆಗಳಿಗೆ ನಡಿಗೆ:** ಇನ್ನೊಂದೆಡೆ ಅರುಣಾಚಲ ಪ್ರದೇಶದ ಒಟ್ಟು 2,226 ಮತಗಟ್ಟೆಗಳ ಪೈಕಿ 228 ಮತಗಟ್ಟೆಗಳಿಗೆ ಕಾಲ್ನಡಿಗೆಯಲ್ಲೇ ಹೋಗಬೇಕು. ಈ ಪೈಕಿ 61 ಮತಗಟ್ಟೆಗಳಿಗಾಗಿ ಎರಡು ದಿನ ನಡೆದೇ ಹೋಗಬೇಕು. ಏಳು ಮತಗಟ್ಟೆಗಳಿಗೆ 3 ದಿನಗಳ ಚಾರಣ ಬೇಕಾಗುತ್ತದೆ.



**ಹಳ್ಳಿಯಲ್ಲಿ ಇಲ್ಲ ತಯಾಂಗ್**

ಇಲ್ಲಿ ಇನ್ನೂ ವಿಚಿತ್ರವಿದೆ. ಈ ಹಳ್ಳಿಯಲ್ಲಿ ತಯಾಂಗ್ ಅವರು ವಾಸ ಮಾಡುತ್ತಿಲ್ಲ. ಇವರ ಮಗಳು ಮತ್ತು ಮಗ ಬೇರೆಡೆ ಕಾಲೇಜುಗಳಲ್ಲಿ ವಾಸ ಮಾಡುತ್ತಿದ್ದಾರೆ. ಹೀಗಾಗಿ ಅವರು ಲೋಹಿತ್ ಜಿಲ್ಲೆಯ ವಕ್ರೋದಲ್ಲಿ ವಾಸ ಮಾಡುತ್ತಿದ್ದಾರೆ. ಅಲ್ಲಿಯೇ ಇವರಿಗೆ ಕೃಷಿ ಭೂಮಿಗಳಿವೆ. ಆದರೆ, ಕೆಲವೇ ಕೆಲವು ಕೆಲಸಗಳಿಗಾಗಿ ಅಥವಾ ಚುನಾವಣಾ ಸಮಯದಲ್ಲಿ ಮಾತ್ರ ತಯಾಂಗ್ ಇಲ್ಲಿಗೆ ಬರುತ್ತಾರೆ. 2014ರ ಚುನಾವಣೆಯಲ್ಲಿ ಮಾಲೋಗಾಮ್‌ನ ಮತಗಟ್ಟೆಯಲ್ಲಿ ಇಬ್ಬರು ಮತದಾರರಿದ್ದರು. ಇನ್ನೊಬ್ಬರು ತಯಾಂಗ್ ಅವರ ವಿಚ್ಛೇದಿತ ಪತಿ ಜಾನೆಲುಮ್ ತಯಾಂಗ್. ಇವರು ವಿಚ್ಛೇದನ ಪಡೆದ ಮೇಲೆ ಬೇರೆ ಬೂತ್‌ಗೆ ತಮ್ಮ ಮತ ಸ್ಥಳಾಂತರ ಮಾಡಿಕೊಂಡಿದ್ದಾರೆ.

- ಮಾಲೋಗಾಮ್ ಎಂಬ ಗ್ರಾಮದಲ್ಲಿ ಮತಗಟ್ಟೆ ಸ್ಥಾಪನೆ
- ಏ.19ಕ್ಕೆ ನಡೆಯಲಿದೆ ಲೋಕಸಭೆ ಚುನಾವಣೆ
- 18ರ ಬೆಳಗ್ಗೆ ತೆರಳಲಿದೆ ಚುನಾವಣಾ ಅಧಿಕಾರಿಗಳ ತಂಡ

₹35 ಕೋಟಿಗೂ ಅಧಿಕ ಮೊತ್ತದ ಆದಾಯಕ್ಕಿಂತ ಹೆಚ್ಚು ಆಸ್ತಿ ಪತ್ತೆ

## 13 ಅಧಿಕಾರಿಗಳಿಗೆ ಲೋಕಾ ಬಿಸಿ

**ಬೆಂಗಳೂರು:** ಲೋಕಸಭೆ ಚುನಾವಣೆ ನೀತಿ ಸಂಹಿತೆ ಮಧ್ಯೆಯೂ ಕಾರ್ಯಾಚರಣೆ ನಡೆಸಿರುವ ಲೋಕಾಯುಕ್ತ ಪೊಲೀಸರು ರಾಜ್ಯದ 13 ಸರಕಾರಿ ಅಧಿಕಾರಿಗಳ ಮೇಲೆ ಬುಧವಾರ ದಾಳಿ ನಡೆಸಿದ್ದು, ಕೋಟ್ಯಂತರ ರು. ಮೌಲ್ಯದ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ.

ಬೆಂಗಳೂರು ನಗರ, ಉಡುಪಿ, ಕಾರವಾರ, ಮಂಡ್ಯ, ಮೈಸೂರು, ಕೊಡಗು, ಧಾರವಾಡ, ಬೀದರ್, ಕೋಲಾರ, ವಿಜಯಪುರ, ಚಿಕ್ಕಬಳ್ಳಾಪುರ ಮತ್ತು ಬೆಳಗಾವಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ 13 ಸರಕಾರಿ ಅಧಿಕಾರಿಗಳ ಕಚೇರಿ ಹಾಗೂ ನಿವಾಸ, ಫಾರಂ ಹೌಸ್ ಸೇರಿದಂತೆ 62 ಕಡೆಗಳಲ್ಲಿ ದಾಳಿ ನಡೆದಿದೆ. ಈ ವೇಳೆ ಅಪಾರ ಪ್ರಮಾಣ ನಗದು, ಚಿನ್ನ, ಬೆಳ್ಳಿ ಆಭರಣ, ವಿದೇಶಿ ಉಡುಗೊರೆ, ಮೊಬೈಲ್ ಫೋನ್, ನಿವೇಶನ, ಫಾರ್ಮ್‌ಹೌಸ್ ಖರೀದಿಯ ದಾಖಲೆ ಪತ್ರಗಳು ಪತ್ತೆಯಾಗಿವೆ. ದಾಳಿಗೊಳಗಾದ ಅಧಿಕಾರಿಗಳ ಬಳಿ 35,83,81,666 ಕೋಟಿ ರು. ಮೌಲ್ಯದ ಆದಾಯಕ್ಕಿಂತ ಹೆಚ್ಚು ಆಸ್ತಿ ಪತ್ತೆಯಾಗಿದ್ದು, ಈ ಕುರಿತು ತನಿಖೆ ಮುಂದುವರಿದಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

**ಯಾರ‍್ಯಾರ ಮೇಲೆ ದಾಳಿ?**

ಬಿಬಿಎಂಪಿ ಬ್ಯಾಟರಾಯನಪುರ ವಿಭಾಗದ ಮುಖ್ಯ ಎಂಜಿನಿಯರ್ ಎಸ್.ಪಿ. ರಂಗನಾಥ್, ಮಂಡ್ಯ ಜಿಲ್ಲೆ ಅಗಸನಪುರ ಗ್ರಾಮ ಪಂಚಾಯಿತಿ ಮಳವಳ್ಳಿಯ ಎಸ್‌ಡಿಎ ಕೃಷ್ಣೇಗೌಡ, ಆರ್‌ಡಿಪಿಆರ್ ಕೊಡಗಿನ ಸಹಾಯಕ ಎಂಜಿನಿಯರ್ ಎಂ.ಎಂ. ಫಯಾಜ್ ಅಹಮದ್, ಕೊಡಗು ಮುಖ್ಯ ಕಾರ್ಯನಿರ್ವಾಹಕ ಎಂದಿನಿಯರ್ ಬಿ.ವಿ. ಜಯಣ್ಣ, ರಾಮನಗರ ಜಿಲ್ಲೆ ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ಯತೀಶ್, ಚಿಕ್ಕಬಳಅಳಾಪುರ ಕೆಆರ್‌ಐಡಿಎಲ್ ಕಾರ್ಯನಿರ್ವಾಹಕ ಎಂಜಿನಿಯರ್ ಸದಾಶಿವಯ್ಯ, ಉತ್ತರ ಕನ್ನಡ ಜಿಲ್ಲೆ ಕಾರವಾರದ ಕಿರಿಯ ಎಂಜಿನಿಯರ್ ಪ್ರಕಾಶ್, ಉಡುಪಿ ಅಬಕಾರಿ ಇಲಾಖೆ ಹೆಚ್ಚುವರಿ ಡಿಸಿ ಎಂ. ರೂಪಾ, ಬೆಳಗಾವಿ ಜಿಲ್ಲೆ ನಿಡಗುಂದಿ ಗ್ರಾಮ ಪಂಚಾಯಿತಿ ಪಿಡಿಒ ಸದಾಶಿವ ಜಯಪ್ಪ ಕರಗಾರ್, ಧಾರವಾಡ ಅರಣ್ಯ ವಲಯದ ಅಧಿಕಾರಿ ಮಹೇಶ್ ಚಂದ್ರಯ್ಯ ಹಿರೇಮಠ್, ಬಾಗಲಕೋಟೆ ಜಿಲ್ಲೆ ಜಮಖಂಡಿಯ ಎಆರ್‌ಟಿಒ ಷಣ್ಮುಗಪ್ಪ ಬೀಷ್ಮ ತೀರ್ಥ, ಬೀದರ್‌ನ ಕಾರಂಜ ಯೋಜನೆಯ ಕಾರ್ಯನಿರ್ವಾಹಕ ಎಂಜಿನಿಯರ್ ಶಿವಕುಮಾರಸ್ವಾಮಿ, ರಾಮನಗರ ಜಿಲ್ಲೆ ಮಾಗಡಿ ಯೋಜನಾ ಪ್ರಾಧಿಕಾರದ ಸಹಾಯಕ ನಿರ್ದೇಶಕ ನಾಗರಾಜಪ್ಪ ಅವರಿಗೆ ಸೇರಿದ ಮನೆ, ಕಚೇರಿಗಳ ಮೇಲೆ ದಾಳಿ ನಡೆಸಲಾಗಿದೆ.



ಲೋಕಾಯುಕ್ತ ದಾಳಿ ವೇಳೆ ಆರ್‌ಟಿಒ ಅಧಿಕಾರಿಯೊಬ್ಬರ ಮನೆಯಲ್ಲಿ ಸಿಕ್ಕ ಅಪಾರ ಚಿನ್ನಾಭರಣ, ವಿದೇಶಿ ಕರೆನ್ಸಿ